₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 29.03.2024 ಸಂಪುಟ: 09 ಸಂಚಿಕೆ:95 ಪುಟಗಳು: 12+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

74,190 ದಾಖಲೆ ಮಟ್ಟಕ್ಕೆ ಏರಿದ್ದ ಸೆನ್ಸೆಕ್ಸ್

- ಆರ್ಥಿಕ ವರ್ಷದ ಕಡೇ ದಿನ ಭರ್ಜರಿ ಟ್ರೇಡಿಂಗ್
- ದಿನದ ಮಧ್ಯ 74,190ಕ್ಕೆ ಏರಿ 73,651 ಅಂಕಕ್ಕೆ ವಹಿವಾಟು ಅಂತ್ಯ
- ಅಮೆರಿಕ ಮಾರುಕಟ್ಟೆಯಲ್ಲಿನ ಧನಾತ್ಮಕ ವ್ಯವಹಾರ
- ನಿಫ್ಟಿಯಲ್ಲೂ ದಾಖಲೆ ವಹಿವಾಟು, 22,516 ಅಂಕಕ್ಕೆ ಏರಿಕೆ
- ದಿನದಂತ್ಯಕ್ಕೆ 22,327 ಅಂಕಕ್ಕೆ ವಹಿವಾಟು ಮುಕ್ತಾಯ
- ಗುಡ್ ಫ್ರೈಡೆ ನಿಮಿತ್ತ ಶುಕ್ರವಾರ ಷೇರುಮಾರುಕಟ್ಟೆಗೆ ರಜೆ

ಕಾರಂತರ ಪ್ರಭಾವಳಿಯಲ್ಲಿ ಕಿರಿಯರು

ಕಾರಂತರ ಸುಳಿಯಲ್ಲಿ ಆರಾಮ

ಪುಟ ತೆರೆದಂತೆ...

ಸದ್ಗುರು, ಇವರೇ ಅಲ್ಲವೇ ನಿಜ ಅರ್ಥದ ಜಗದ್ಗುರು?
ಶಿಶಿರ ಕಾಲ
ಸಂ.ಪುಟ | 6

ನೆತ್ತಿಂಗ, ಗೂಬೆಗಳ ಲೋಕದಲ್ಲಿ ಒಂದು ಸುತ್ತು
ಶಶಾಂಕಣ
ಸಂ.ಗಮ | 7

ಕೋವಿಡ್ ಸಮಯದಲ್ಲಿ ಕುಮಾರಸ್ವಾಮಿ ಕುಟುಂಬ ಎಲ್ಲಿತ್ತು?
ಡಿಸಿಎಂ ಶಿವಕುಮಾರ್
ನಾಡು ಕರುನಾಡು | 10

ಭಾರತ ಮತ ಮಹಾ ಸಮರ

- ಹ್ಯಾಟ್ರಿಕ್ ಗೆಲುವಿನ ಸರದಾರನಿಗೆ ಕಾಂಗ್ರೆಸ್ ಸವಾಲೊಡ್ಡುವುದೇ?
- ಸಚಿವ ಮಧು ಬಂಗಾರಪ್ಪ ವಿರುದ್ಧ ಬಿವೈಆರ್ ಕಿಡಿ
- 2014ರಿಂದಲೇ ಜೆಡಿಎಸ್ - ಬಿಜೆಪಿ ಮೈತ್ರಿ; ಹೊಸದೇನಲ್ಲ
- ಹರ್ಯಾಣದಲ್ಲಿ ಯಾರಿಗೆ ಗೆಲುವಿನ ಹರಿವಾಣ?
- ಎಂದೂ ಪಿಲಿಭಿತ್ ಬಿಟ್ ಹೋಗಲ್ಲ: ವರುಣ್ ಗಾಂಧಿ
- ಆತ್ಮಹತ್ಯೆಗೆ ಯತ್ನಿಸಿದ್ದ ಸಂಸದ ಗಣೇಶಮೂರ್ತಿ ನಿಧನ

ದಾರಿದೀಪೋಕ್ತಿ

ನಿಮ್ಮ ಸಂತಸದಲ್ಲಿ ಖುಷಿ ಕಾಣುವವರು ಮತ್ತು ನಿಮ್ಮ ದುಃಖದಲ್ಲಿ ಬೇಸರಗೊಳ್ಳುವವರನ್ನು ಯಾವ ಕಾರಣಕ್ಕೂ ದೂರ ಮಾಡಬಾರದು, ನಿರ್ಲಕ್ಷಿಸಬಾರದು. ಅಂಥವರಿಗೆ ನಿಮ್ಮ ಹೃದಯದಲ್ಲಿ ವಿಶೇಷ ಸ್ಥಾನಮಾನ ಕೊಡಬೇಕು.

ವಕ್ರತುಂಡೋಕ್ತಿ

ಕಾಲೇಜು ದಿನಗಳಲ್ಲಿ ಚೆನ್ನಾಗಿ ಓದಬೇಕು. ಯಾಕೆಂದರೆ ನಂತರ ಹೇಗಿದ್ದರೂ ಅವು ಸ್ವಲ್ಪವೂ ಪ್ರಯೋಜನಕ್ಕೆ ಬರುವುದಿಲ್ಲ.

ಸಿಜೆಐಗೆ 600ಕ್ಕೂ ಹೆಚ್ಚು ವಕೀಲರಿಂದ ಪತ್ರ | ರಾಜಕೀಯ ನಾಯಕರ ಪ್ರಕರಣದಲ್ಲಿ ಒತ್ತಡ ತಂತ್ರ

ನ್ಯಾಯಾಂಗದ ಮೇಲೆ ಪಟ್ಟಭದ್ರರಿಂದ ಒತ್ತಡ

- ನ್ಯಾಯಾಲಯಗಳನ್ನು ರಕ್ಷಿಸುವಂತೆ ಸಿಜೆಐಗೆ ಮನವಿ
- ಹರೀಶ್ ಸಾಳ್ಳೆ, ಉದಯ್ ಹೊಳ್ಳ ಸೇರಿ ಪ್ರಮುಖರಿಂದ ಸಹಿ

ದೆಹಲಿ: ನ್ಯಾಯಾಂಗದ ಮೇಲೆ ಪಟ್ಟಭದ್ರರಿಂದ ಒತ್ತಡ ಹೇರಲಾಗುತ್ತಿದ್ದು, ಇವರಿಂದ ನ್ಯಾಯಾಂಗವನ್ನು ರಕ್ಷಿಸುವಂತೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಹಿರಿಯ ವಕೀಲರಾದ ಹರೀಶ್ ಸಾಳ್ವೆ, ಪಿಂಕಿ ಆನಂದ್, ಕರ್ನಾಟಕದ ಉದಯ್ ಹೊಳ್ಳ ಸೇರಿ 600ಕ್ಕೂ ಹೆಚ್ಚು ವಕೀಲರು 'ನ್ಯಾಯಾಂಗ ಅಪಾಯದಲ್ಲಿದೆ' ಎಂಬ ಶೀರ್ಷಿಕೆಯ ಪತ್ರ ಬರೆದಿದ್ದಾರೆ.

ಕೆಲವರು ನ್ಯಾಯಾಂಗ ಫಲಿತಾಂಶಗಳ ಮೇಲೆ ಪ್ರಭಾವ ಬೀರಲು, ವಿಶೇಷವಾಗಿ ರಾಜಕೀಯ ನಾಯಕರು ಮತ್ತು ಭ್ರಷ್ಟಾಚಾರದ ಆರೋಪಗಳನ್ನು ಒಳಗೊಂಡ ಪ್ರಕರಣಗಳಲ್ಲಿ ಒತ್ತಡ ತಂತ್ರಗಳನ್ನು ಬಳಸುತ್ತಿದ್ದಾರೆ ಎಂದು ವಕೀಲರು ಆರೋಪಿಸಿದ್ದಾರೆ.

ಈ ಕ್ರಮಗಳು ಪ್ರಜಾಪ್ರಭುತ್ವದ ರಚನೆಗೆ ಮತ್ತು ನ್ಯಾಯಾಂಗ ಪ್ರಕ್ರಿಯೆಗಳಲ್ಲಿ ಇಟ್ಟಿರುವ ನಂಬಿಕೆಗೆ ಗಮನಾರ್ಹ ಬೆದರಿಕೆಯನ್ನುಂಟುಮಾಡುತ್ತವೆ. 2024ರ ಲೋಕಸಭಾ ಚುನಾವಣೆಗೆ ಸ್ವಲ್ಪ ಮುಂಚಿತವಾಗಿ ಈ ಬೆಳವಣಿಗೆಗಳು ಕಂಡುಬಂದಿವೆ ಎಂದು ಒತ್ತಿಹೇಳಿರುವ ವಕೀಲರ ಗುಂಪು, ಕೆಲವು ಅಂಶಗಳು ನ್ಯಾಯಾಧೀಶರ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿವೆ ಎಂದಿದೆ. ತಮ್ಮ ಪ್ರಕರಣಗಳಲ್ಲಿ ನಿರ್ದಿಷ್ಟ ರೀತಿಯಲ್ಲಿ ನಿರ್ಧರಿಸಲು ನ್ಯಾಯಾಧೀಶರ ಮೇಲೆ ಒತ್ತಡ ಹೇರಲು ಸಾಮಾಜಿಕ ಮಾಧ್ಯಮಗಳಲ್ಲಿ ಸುಳ್ಳುಗಳನ್ನು ಹರಡುತ್ತಿವೆ ಎಂದು ಆರೋಪಿಸಿದೆ.

ಕಾಂಗ್ರೆಸ್ ವಿರುದ್ಧ ಮೋದಿ ವಾಗ್ಬಾಣ

ಸಿಜೆಐಗೆ 600ಕ್ಕೂ ಹೆಚ್ಚು ವಕೀಲರು ಬರೆದಿರುವ ಪತ್ರವನ್ನು ಆಧಾರವಾಗಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ. ನ್ಯಾಯಾಂಗದ ಸಮಗ್ರತೆಯನ್ನು ದುರ್ಬಲಗೊಳಿಸುವ ಪ್ರಯತ್ನಗಳ ಬಗ್ಗೆ ಹಿರಿಯ ವಕೀಲರಾದ ಹರೀಶ್ ಸಾಳ್ವೆ ಸೇರಿದಂತೆ ಪ್ರಮುಖ ವಕೀಲರು ಸಿಜೆಐಗೆ ಪತ್ರ ಬರೆದಿದ್ದಾರೆ. ಈ ಮೂಲಕ ಇತರರನ್ನು ಬೆದರಿಸುವುದು ಕಾಂಗ್ರೆಸ್‌ನ ಹಳೆಯ ತಂತ್ರಗಾರಿಕೆಯಾಗಿದೆ ಎಂದು ಎಕ್ಸ್‌ನಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ. ಮೋದಿ ಅವರ ಈ ಹೇಳಿಕೆಗೆ ಕಿಡಿಕಾರಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಿಮ್ಮ ಕಾಲದಲ್ಲೇ ನಾಲ್ವರು ನ್ಯಾಯಮೂರ್ತಿಗಳು ಪತ್ರಿಕಾಗೋಷ್ಠಿ ನಡೆಸಿದ್ದರು. ಆಗ ಪ್ರಜಾಪ್ರಭುತ್ವದ ನಾಶದ ಬಗ್ಗೆ ಮಾತನಾಡಿದ್ದರು. ಇವರಲ್ಲಿ ಒಬ್ಬರನ್ನು ನೀವೇ ರಾಜ್ಯಸಭಾ ಸದಸ್ಯರನ್ನಾಗಿ ಮಾಡಲಿಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಇಬ್ಬರ ಜಗಳದಲ್ಲಿ 3ನೇ ವ್ಯಕ್ತಿಗೆ ಲಾಭ ಸಾಧ್ಯತೆ | ರಾಜೀನಾಮೆ ಬೆದರಿಕೆ ಹಾಕಿದ ಶಾಸಕರ ಮೇಲೆ ಹೈಕಮಾಂಡ್ ಅಸಮಾಧಾನ | ಟಿಕೆಟ್ ಯಾರಿಗೆ ಎನ್ನುವುದರ ಮೇಲೆ, ಎರಡು ಬಣದ ಲೆಕ್ಕಾಚಾರ

ಕೋಲಾರ ಕಾಂಗ್ರೆಸ್ ಡ್ರಾಮಾ ತಾತ್ಕಾಲಿಕವಾಗಿ ಸುಖಾಂತ್ಯ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿದ್ದ ಕೋಲಾರ ಭಾಗದ ಶಾಸಕರ ರಾಜೀನಾಮೆ ಪ್ರಹಸನ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ತಾತ್ಕಾಲಿಕ ಸುಖಾಂತ್ಯವಾಗಿದೆ. ಆದರೆ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಎನ್ನುವ ಹೇಳಿಕೆಯ ನಡುವೆಯೂ ಎರಡೂ ಕಡೆಯಿಂದ 'ಒಳ ಏಟು' ಆತಂಕ ಮುಂದುವರಿದಿದೆ.ಹಿರಿಯ ನಾಯಕರ ಎಚ್ಚರಿಕೆ ಮಾತುಗಳಿಗೆ ತಣ್ಣಗಾದ ರಾಜೀನಾಮೆಗೆ ಮುಂದಾಗಿದ್ದ ಶಾಸಕರು, ಪಕ್ಷ ಯಾರಿಗೇ ಟಿಕೆಟ್ ನೀಡಿದರೂ ಒಗ್ಗಟ್ಟಿನಿಂದ ಗೆಲುವಿಗೆ ಶ್ರಮಿಸುವುದಾಗಿ ಭರವಸೆ ನೀಡಿದ್ದಾರೆ. ಅಲ್ಲದೆ, ಇನ್ನು ಮುಂದೆ ಯಾವುದೇ ಗೊಂದಲಕ್ಕೆ ಅವಕಾಶ ಮಾಡಿಕೊಡದೆ ಕೆಲಸ ಮಾಡುವುದಾಗಿ ತಿಳಿಸಿದ್ದಾರೆ. ಆದರೂ ಆಂತರಿಕವಾಗಿ ಅಸಮಾಧಾನ ಮುಂದುವರಿದಿದೆ ಎಂದು ತಿಳಿದುಬಂದಿದೆ. → 8

ವೀಣಾ ಬಂಡಾಯ ಖಚಿತ?

ಕೋಲಾರ ಬಂಡಾಯ ಶಮನವಾಗುವ ಸಾಧ್ಯತೆ ಬೆನ್ನಲ್ಲೇ ಬಾಗಲಕೋಟಿ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದಾ ವೀಣಾ ಕಾಶಪ್ಪನವರ್ ಅವರನ್ನು ಸಮಾಧಾನಪಡಿಸಲು ನಡೆದ ಸಭೆ ವಿಫಲವಾಗಿದೆ. ಹೀಗಾಗಿ ಅವರು ಬಂಡಾಯವಾಗಿ ಸ್ಪರ್ಧಿಸುವ ಸಾಧ್ಯತೆಯಿದೆ ಎನ್ನಲಾಗಿದೆ. ವೀಣಾ ಕಾಶಪ್ಪನವರ್ ಬದಲಿಗೆ ಸಚಿವ ಶಿವಾನಂದ ಪಾಟೀಲ್ ಪುತ್ರಿ ಸಂಯುಕ್ತಾ ಪಾಟೀಲ್ ಅವರಿಗೆ ಟಿಕೆಟ್ ನೀಡಲಾಗಿತ್ತು. ಸಭೆ ಬಳಿಕ ವೀಣಾ ಅವರು ಮತ್ತೊಮ್ಮೆ ಕಣ್ಣೀರು ಹಾಕಿಕೊಂಡು ಹೊರಬಂದರೆ, ವಿಜಯಾನಂದ ಕಾಶಪ್ಪನವರ್ ಗರಂ ಆಗಿಯೇ ಸಿಎಂ ನಿವಾಸದಿಂದ ಹೊರನಡೆದರು.

ಹೈಕಮಾಂಡ್ ಹೇಳಿದ್ದೇನು?

- ಅಭ್ಯರ್ಥಿ ಅಂತಿಮಗೊಳಿಸದೇ ಇದ್ದರೂ ಸಚಿವ, ಶಾಸಕರು ರಾಜೀನಾಮೆಗೆ ಮುಂದಾಗಿದ್ದು ಏಕೆ?
- ಶಾಸಕರು, ಮಂತ್ರಿಗಳೇ ಈ ರೀತಿಯ ರಾಜೀನಾಮೆ ಪ್ರಹಸನದಿಂದ ಯಾವ ಸಂದೇಶ ಕೊಡುತ್ತಿದ್ದಿರಾ?
- ಏನೇ ಗೊಂದಲವಿದ್ದರೂ ಪಕ್ಷದೊಳಗೆ ಚರ್ಚಿಸುವುದು ಬಿಟ್ಟು, ಮಾಧ್ಯಮಗಳ ಮುಂದೆ ಹೋಗುವ ಅಗತ್ಯವೇನಿತ್ತು.
- ಪಕ್ಷದ ಹೈಕಮಾಂಡ್ ಯಾರಿಗೆ ಟಿಕೆಟ್ ಕೊಟ್ಟರೂ ಅವರ ಪರವಾಗಿ ಪ್ರಚಾರ ಮಾಡುವುದು ಕರ್ತವ್ಯ
- ಗೊಂದಲಕ್ಕೆ ಸಂಬಂಧಿಸಿದಂತೆ ಯಾರೂ ಬಹಿರಂಗವಾಗಿ ಪ್ರತಿಕ್ರಿಯೆ ನೀಡಬಾರದು

ಸಭೆ ಬಾರದ ಮುನಿಯಪ್ಪ

ಈ ನಡುವೆ ಕೋಲಾರ ಲೋಕಸಭಾ ಚುನಾವಣೆಯಲ್ಲಿನ ಗೊಂದಲಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಸಚಿವ ಸುಧಾಕರ್ ನೇತೃತ್ವದಲ್ಲಿ ಜಿಲ್ಲೆಯ ಹಲವು ನಾಯಕರು ಭಾಗವಹಿಸಿದ್ದರು. ಆದರೆ ಸಚಿವ ಕೆ.ಎಚ್.ಮುನಿಯಪ್ಪ ಭಾಗವಹಿಸದೇ, ಸಭೆ ಆರಂಭಕ್ಕೂ ಮೊದಲೇ ಮುಖ್ಯಮಂತ್ರಿಯವರನ್ನು ಭೇಟಿಯಾಗಿ ಪರಿಸ್ಥಿತಿ ವಿವರಿಸಿದ್ದರು. ಆದ್ದರಿಂದ ಇದೀಗ ರಮೇಶ್ ಕುಮಾರ್ ಬಣದವರಿಗೆ ಟಿಕೆಟ್ ನೀಡಿದರೇ ಮುನಿಯಪ್ಪ ಅವರು ತಿರುಗಿ ಬೀಳುವ ಸಾಧ್ಯತೆಯಿದೆ.

ಬುಧವಾರ ನಡೆದ ಬೆಳವಣಿಗೆ ಬಗ್ಗೆ ಪಕ್ಷದ ಹೈಕಮಾಂಡ್, ಸಿಎಂ, ಡಿಸಿಎಂ ಗಂಭೀರವಾಗಿ ಪರಿಗಣಿಸಿದ್ದಾರೆ. ಎಲ್ಲವನ್ನು ಸರಿ ಮಾಡುವ ಭರವಸೆ ನೀಡಿದ್ದು, ವಿಶ್ವಾಸವಿಡಲು ಹೇಳಿದ್ದಾರೆ. ಬುಧವಾರದ ಘಟನೆಗೆ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೇವೆ. ಅಂತಿಮವಾಗಿ ಅವರೆಲ್ಲರೂ ಸೇರಿ ಏನೇ ತೀರ್ಮಾನಕ್ಕೆ ಬಂದರೂ ಅದಕ್ಕೆ ಬದ್ಧರಾಗಿರುವುದಾಗಿ ಹೇಳಿದ್ದೇವೆ.
- ಡಾ.ಎಂ.ಸಿ.ಸುಧಾಕರ್, ಸಚಿವ

ಯಾರೂ ರಾಜೀನಾಮೆ ನೀಡುವುದಿಲ್ಲ. ಅಭ್ಯರ್ಥಿ ಆಯ್ಕೆ ವಿಷಯವಾಗಿ ಕೆಲವರಿಂದ ಒತ್ತಡವಿದೆ. ಈವರೆಗೂ ಯಾವುದೇ ಅಭ್ಯರ್ಥಿಯನ್ನು ಘೋಷಣೆ ಮಾಡಿಲ್ಲ. ನಾನು ಈಗಾಗಲೇ ಸಿಎಂ ಸಿದ್ದರಾಮಯ್ಯ, ದೆಹಲಿಯ ನಾಯಕರೊಂದಿಗೆ ಚರ್ಚಿಸಿದ್ದೇನೆ. ಕೋಲಾರ ರಾಜ್ಯದಲ್ಲೇ ಕಾಂಗ್ರೆಸ್ ಗೆಲುವು ಕಾಣುವ ಮೊದಲ ಕ್ಷೇತ್ರ. ಎಲ್ಲರೂ ಒಟ್ಟಿಗೆ ಸೇರಿ ಗೆಲ್ಲಿಸುತ್ತಾರೆ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಭಾರತ ಮತ ಮಹಾ ಸಮರ

ಮುಖ್ಯಮಂತ್ರಿ ಖಂಡು ಸೇರಿ ಐವರು ಅವಿರೋಧವಾಗಿ ವಿಧಾನಸಭೆಗೆ ಪ್ರವೇಶ

ಅರುಣಾಚಲ ಸಿಎಂ ಅವಿರೋಧ ಆಯ್ಕೆ

ಇಟಾನಗರ: ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೆಮಾ ಖಂಡು ಮತ್ತು ಇತರ ನಾಲ್ವರು ಬಿಜೆಪಿ ಅಭ್ಯರ್ಥಿಗಳು ಅವಿರೋಧವಾಗಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ನಾಮಪತ್ರ ಸಲ್ಲಿಕೆಯ ಕೊನೆ ದಿನವಾದ ಬುಧವಾರ ತಮ್ಮ ವಿಧಾನಸಭಾ ಸ್ಥಾನಗಳಿಂದ ಬೇರೆ ಯಾವುದೇ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿಲ್ಲ. ಅರುಣಾಚಲ ಪ್ರದೇಶ 'ದಲ್ಲಿ ಲೋಕಸಭಾ ಚುನಾವಣೆಯ ಜೊತೆಗೆ ವಿಧಾನಸಭಾ ಚುನಾವಣೆ ನಡೆಯಲಿದೆ.

ಅನಾಮಿಕರಿಂದ ಜಾತಿ ನಿಂದನೆ | ಬಿಜೆಪಿಗರಿಂದ ನನ್ನ ಹತ್ಯೆಗೆ ಯತ್ನ

ಪ್ರಿಯಾಂಕ್ ಖರ್ಗೆಗೆ ಜೀವ ಬೆದರಿಕೆ

- ಸ್ವತಃ ಸಚಿವ ಪ್ರಿಯಾಂಕ್‌ರಿಂದಲೇ ನೇರ ಆರೋಪ
- ಎನ್‌ಕೌಂಟರ್ ಮಾಡುವ ಬಗ್ಗೆ ಪತ್ರದಲ್ಲಿ ಬೆದರಿಕೆ
- ಫೆ.15ರಂದು ಬೆಂಗಳೂರು ಕಚೇರಿಗೆ ಬಂದಿದೆ ಪತ್ರ

ಕಲಬುರಗಿ: ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಅನಾಮಿಕರಿಬ್ಬರು ಜಾತಿ ನಿಂದನೆ ಮಾಡಿದಲ್ಲದೇ, ಹತ್ಯೆ ಮಾಡುವುದಾಗಿ ಜೀವ ಬೆದರಿಕೆಯ ಪತ್ರ ಬರೆದಿದ್ದಾರೆ.

ಈ ಕುರಿತು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಪ್ರಿಯಾಂಕ್ ಖರ್ಗೆ ಅವರು, ನನ್ನ ಹೆಣ ಬೀಳಿಸಿದರು ಪರವಾಗಿಲ್ಲ, ಈ ಚುನಾವಣೆ ಗೆಲ್ಲಬೇಕು ಎಂದು ಬಿಜೆಪಿಯವರು ಮುಂದಾಗಿದ್ದಾರೆ. ಫೆ.15ರಂದು ಇನ್‌ಲ್ಯಾಂಡ್ ಲೆಟರ್ ಒಂದು ನನ್ನ ಹೆಸರಿನ ಮೇಲೆ ಬೆಂಗಳೂರಿನ ಕಚೇರಿಗೆ ಬಂದಿದೆ. ಈ ಪತ್ರದಲ್ಲಿ ಬಿಜೆಪಿಯ ಮನುವಾದಿಗಳು ನನಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಆರೋಪಿಸಿದರು. ನಮ್ಮ ತಂದೆ ತಾಯಿ ನಮ್ಮ ಕುಟುಂಬದವರಿಗೆ ಹೊಲೆಯ ಮಾದಿಗ ಅಂತಾ ಉಲ್ಲೇಖ ಮಾಡಿ, ನೇರವಾಗಿ ಎನ್‌ಕೌಂಟರ್ ಮಾಡುತ್ತೇನೆ ಎಂದು ಬೆದರಿಕೆ ಹಾಕಿ ನನ್ನ ಕಚೇರಿಗೆ ಪತ್ರ ಬರೆದಿದ್ದಾರೆ. ಅಲ್ಲದೇ, ನನ್ನ ತಂದೆ ತಾಯಿ, ನಮ್ಮ ಕುಟುಂಬ ದವರಿಗೆ ಹಾಗೂ ನಮ್ಮ ಸಮುದಾಯದ ಹೆಸರನ್ನು ಪತ್ರದಲ್ಲಿ ಉಲ್ಲೇಖಿಸಿದ್ದಾರೆ ಎಂದು ಸುದ್ದಿಗೋಷ್ಠಿಯಲ್ಲಿ ಸಚಿವ ಖರ್ಗೆ ಮಾಹಿತಿ ನೀಡಿದರು.

ದಿಂಗಾಲೇಶ್ವರ ಶ್ರೀಗಳಿಗೆ ಜೋಷಿ ಸ್ಪಷ್ಟನೆ | ಏನು ತಪ್ಪಾಗಿದೆ ಎಂಬುದನ್ನು ಹೇಳಲಿ

ನನ್ನಿಂದ ತಪ್ಪಾಗಿದ್ದರೆ ಕ್ಷಮೆ ಕೇಳುತ್ತೇನೆ

ಹುಬ್ಬಳ್ಳಿ: ನನ್ನಿಂದ ತಪ್ಪಾಗಿದ್ದರೆ ಕ್ಷಮೆ ಕೇಳಲು ಹಿಂಜರಿ ಯುವುದಿಲ್ಲ, ಏನಾ ದರೂ ತಪ್ಪಾಗಿದ್ದರೆ ಹೇಳಲಿ, ಕ್ಷಮೆ ಕೇಳು ತ್ತೇನೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಹೇಳಿದ್ದಾರೆ.

ಧಾರವಾಡ ಲೋಕಸಭೆ ಟಿಕೆಟ್ ವಿಚಾರವಾಗಿ ಶಿರಹಟ್ಟಿ ಪೀಠದ ಶ್ರೀ ದಿಂಗಾಲೇ ಶ್ವರ ಶ್ರೀಗಳ ಆಕ್ರೋಶ ಸಂಬಂಧ ಜೋಷಿ ಅವರು ಸ್ಪಷ್ಟನೆ ನೀಡಿದ್ದಾರೆ. ಬಿಜೆಪಿ, ಜೆಡಿಎಸ್ ಕಾರ್ಯಕರ್ತರ ಸಭೆಗೂ ಮುನ್ನ ಮಾತನಾಡಿದ ಅವರು, ಜೋಶಿ ಲಿಂಗಾಯತರನ್ನು ತುಳಿದಿದ್ದಾರೆ ಎಂಬ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯಿಸಿ, ಸ್ವಾಮೀಜಿ ಹಾಗೂ ಶಿರಹಟ್ಟಿ ಪೀಠ ನನಗೆ ಸದಾಕಾಲ ಆಶೀರ್ವಾದ ಮಾಡಿದೆ. ಸ್ವಾಮೀಜಿಗಳಿಗೆ ತಪ್ಪು ತಿಳುವಳಿಕೆಯಾಗಿದ್ದರೆ ಬಗೆಹರಿಸುತ್ತೇವೆ. ತಪ್ಪಾಗಿದ್ದರೆ ಕ್ಷಮೆ ಕೇಳಲು ನಾನು ಹಿಂಜರಿಯಲ್ಲ. ಏನಾದರೂ ತಪ್ಪು ಮಾಡಿದ್ದರೆ ನೇರವಾಗಿ ಹೇಳಲಿ, ಕ್ಷಮೆ ಕೇಳುತ್ತೇನೆ. ಸ್ವಾಮೀಜಿ ಏನು ಹೇಳಿದರೂ ನನಗೆ ಆಶೀರ್ವಾದ. ಈ ಸಂದರ್ಭದಲ್ಲಿ ನಾನು ಹೆಚ್ಚೇನೂ ಮಾತಾಡಲ್ಲ, ಸಮಯ ಕೊಟ್ಟರೆ ಅವರ ಜತೆ ಮಾತನಾಡಲು ನಾನು ತಯಾರಿದ್ದೇನೆ ಎಂದು ಸ್ಪಷ್ಟಪಡಿಸಿದರು. ನಾನು ಲೋಕಸಭಾ ಸದಸ್ಯನಾದ ಮೇಲೆ ಕ್ಷೇತ್ರದಲ್ಲಿ 8 ವಿಧಾನಸಭಾ ಕ್ಷೇತ್ರಗಳ ಪೈಕಿ ಏಳು ಜನ ಲಿಂಗಾಯತರಿಗೆ ಟಿಕೆಟ್ ಕೊಡಲಾಗಿದೆ. ಎಲ್ಲಾ ಸಮುದಾಯಕ್ಕೂ ನಾವು ಅವಕಾಶ ಕೊಟ್ಟಿದ್ದೇವೆ. ದಿಂಗಾಲೇಶ್ವರ ಸ್ವಾಮೀಜಿಗಳ ಬಗ್ಗೆ ನನಗೆ ಗೌರವ, ಶ್ರದ್ಧೆ ಇದೆ ಎಂದು ಜೋಶಿ ಹೇಳಿದರು.

ರಾಮೇಶ್ವರಂ ಬಾಂಬ್ ಸ್ಫೋಟ: ಎನ್‌ಐಎ ದಾಳಿ

ಕೆಫೆ ಸ್ಫೋಟ ಕೇಸ್ ಸಂಚುಕೋರನ ಸೆರೆ

- ಕರ್ನಾಟಕ ಸೇರಿ ದೇಶದ 18 ಕಡೆ ದಾಳಿ ನಡೆಸಿದ್ದ ಎನ್‌ಐಎ
- ದೊಡ್ಡ ಮಟ್ಟದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದು ತನಿಖೆಯಲ್ಲಿ ಬಹಿರಂಗ
- ಸ್ಫೋಟಕ ಸಾಮಗ್ರಿ ಸರಬರಾಜು ಮಾಡುತ್ತಿದ್ದ ಆರೋಪಿ

ಬೆಂಗಳೂರು: ನಗರದ ರಾಮೇಶ್ವರಂ ಕೆಫೆಯಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳು ಒಬ್ಬನನ್ನು ಬಂಧಿಸಿದ್ದಾರೆ.

ಮುಜಾಮಿಲ್ ಶರೀಫ್ ಬಂಧಿತ. ಕರ್ನಾಟಕದ 12, ತಮಿಳುನಾಡಿನ 5 ಮತ್ತು ಉತ್ತರ ಪ್ರದೇಶದ 1 ಕಡೆ ಸೇರಿದಂತೆ 18 ಸ್ಥಳಗಳಲ್ಲಿ ದಾಳಿ ನಡೆಸಿ ಪರಿಶೀಲಿಸಿದ ಬ